<u>ದಿನಾಂಕಃ 17-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು:-</u>

<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದ :-</u>

ನಾನು ಹಿಂದಿ ಶಿಕ್ಷಕ ಎಂದು ಕೆಲಸ ಮಾಡಿ ಈ ನಿವೃತಿ ಹೊಂದಿದ್ದೇನೆ. ದಾಖಲೆಗಳನ್ನು ಬರೆಯುವುದರ ಕುರಿತು ನನಗೆ ಮಾಹಿತಿ ಇದೆ. ದಿನಾಂಕ 08.02.2021 ರಂದು ಖರೀದಿ ಕರಾರು ಪತ್ರ ಆಗಿದೆ. ಪತ್ರವನ್ನು ರೇವಣ್ಣನವರ ಕಛೇರಿಯಲ್ಲಿ ಮಾಡಿಸಲಾಗಿದೆ. ಅದನ್ನು ಮದ್ಯಾಹ್ನದ ಸಮಯದಲ್ಲಿ ಮಾಡಿಸಲಾಗಿದೆ. ಪತ್ರವನ್ನು ಬರೆಯುವ ಸಮಯದಲ್ಲಿ ನಾನು ರೇವಣ್ಣ ಮತ್ತು ಜಬೀವುಲ್ಲಾ ಇದ್ದೆವು. ನಾನು ಮತ್ತು ಜಬೀವುಲ್ಲಾ ಒಂದೇ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಕರಾರು ಮಾತುಕತೆ ಆಗಿದೆ ಎಂದು ವಾದಿ ನನಗೆ ತಿಳಿಸಿದ್ದಾರೆ ಆದರೆ ಯಾವ ಮಾತುಕತೆಗಳು ಆಗಿವೆ ಎಂದು ನನಗೆ ತಿಳಿದಿಲ್ಲ. ದಿನಾಂಕ 08.02.2021 ಕ್ಕಿಂತ ಎಷ್ಟು ದಿನಗಳ ಪೂರ್ವದಲ್ಲಿ ಮತ್ತು ಯಾವ ತರಹದ ಮಾತುಕತೆ ಆಗಿದೆ ಎಂದು ನನಗೆ ವೈಯ್ಯುಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನನಗೆ 1 ನೇ ಪ್ರತಿವಾದಿಯ ಕುಟುಂಬದ ಪರಿಚಯ ಇದೆ ಅವರ ತಮ್ಮ ನನ್ನ ಸಹಪಾಠಿ. ಅವರ ಕೊನೆಯ ಮಗಳ ಹೆಸರು ಶ್ವೇತ ಎಂದರೆ ಸರಿ. 2021 ರಲ್ಲಿ ಶ್ವೇತ ಅಂದರೆ 4 ನೇ ಪ್ರತಿವಾದಿಯ ಮದುವೆಯಾಗಿರಲಿಲ್ಲ ಎಂದರೆ ಸರಿ. ಆ ಸಂಧರ್ಭದಲ್ಲಿ 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿ. ಹಣದ ಅವಶ್ಯಕತೆ ಇದ್ದ ಕಾರಣ ವಾದಿಯ ಬಳಿ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಾದಿ ಹಣದ ಭದ್ರತೆಗೆ ದಾಖಲೆ ಮಾಡಿಕೊಡಬೇಕು ಎಂದು ಕೇಳಿದ್ದರು ಎಂದರೆ ಸರಿ. ಮನೆಯವರೆಲ್ಲರೂ ಬಂದು ಸಹಿ ಮಾಡಬೇಕು ಎಂದು ಅವರು ಹೇಳಿದ್ದರು ಎಂದರೆ ಸರಿ. ಹಣ ಪಡೆದುಕೊಳ್ಳುವ ಸಲುವಾಗಿ ಅವರೆಲ್ಲರೂ ಸಹಿ ಮಾಡಿ ದಾಖಲೆಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಜಮೀನಿಗಾಗಿ ವ್ಯವಹಾರ ಆಗಿದೆ ಎನ್ನುತ್ತಾರೆ. ಹಣದ ಭದ್ರತೆಗಾಗಿ ದಾಖಲೆ ಬರೆದುಕೊಡಬೇಕು ಎಂದು ಮಾತು ಕತೆ ಆಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಂದಿಗೂ ಜಮೀನು ಮಾರಾಟ ಮಾಡಲು ಒಪ್ಪಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ನನಗೆ ಜಮೀನುಗಳು ಇಲ್ಲ. 5 ಗುಂಟೆಗಿಂತಲೂ ಕಡಿಮೆ ಜಮೀನು ನೋದಂಣಿ ಮಾಡಬಾರದು ಎಂಬ ಕಾನೂನು ಇದೆ ಎಂದರೆ ನನಗೆ ಗೊತ್ತಿಲ್ಲ. ಜಮೀನು ಮಾರಾಟ ಮಾಡಬೇಕಾದರೆ ನಕ್ಷೆ ಬೇಕಾಗುತ್ತದೆ ಎಂದರೆ ಸರಿ. ಅದು ಇಲ್ಲದಿದ್ದರೆ ದಾಖಲೆ ನೋದಂಣಿ ಆಗುವುದಿಲ್ಲ ಎಂದರೆ ಸರಿ. ಮಾರಾಟ ವ್ಯವಹಾರ ಪೂರ್ಣ ಆಗಬೇಕಾದರೆ, ಮಾರಾಟಗಾರರು ಮತ್ತು ಖರೀದಿದಾರರು ಜಂಟಿ ಅರ್ಜಿ ಕೊಟ್ಟು ನಕ್ಷೆ ಪಡೆದುಕೊಳ್ಳಬೇಕು ಎಂದರೆ ಸರಿ. ನಕ್ಷೆ ಪಡೆದುಕೊಳ್ಳುವ ಕುರಿತು ನಿಭಂಧನೆಯನ್ನು ಕರಾರಿನಲ್ಲೂ ಕೂಡ ನಮೂದಿಸುತ್ತಾರೆ ಎಂದರೆ ಸರಿ. ನಕ್ಷೆಯನ್ನು ದಾಖಲೆ ನೋದಂಣಿ ಮಾಡುವ ಸಮಯದಲ್ಲಿ ದಸ್ತಾವೇಜಿನೊಂದಿಗೆ

ಕೊಡುತ್ತಾರೆ ಎಂದರೆ ಸರಿ. ವಾದಿ ಈ ಪ್ರಕರಣದಲ್ಲಿ ನಕ್ಷೆ ಪಡೆದುಕೊಳ್ಳಲು ಹೋಗುತ್ತಿದ್ದರು. ನಕ್ಷೆ ತಯಾರಿಸುವ ನಡುವಳಿ ಚಾಲ್ತಿ ಇದೆ ಎಂದು ನನಗೆ ಗೊತ್ತಾಯಿತು. ಕರಾರು ಆದ ನಂತರದಲ್ಲಿ ವಾದಿಯೇ ನನಗೆ ಈ ವಿಷಯವನ್ನು ತಿಳಿಸಿದ್ದಾರೆ. ಇಲ್ಲಿಯವರೆಗೂ ವಾದಿ 1 ನೇ ಪ್ರತಿವಾದಿಯೊಂದಿಗೆ ಸೇರಿ ನಕ್ಷೆ ಪಡೆದುಕೊಳ್ಳಲು ಅರ್ಜಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಹೋಗುತ್ತಿದ್ದರು ಎನ್ನುತ್ತಾರೆ. ನಾನು ಕೇಳಿದಾಗ ವಾದಿ ನಕ್ಷೆ ತಯಾರಾಗಿದೆ ಎಂದು ಹೇಳಿದ್ದರು.

ಕರಾರು ಪತ್ರ ಆದ 6 ತಿಂಗಳು ಕಳೆದರೂ ಕೂಡ 4 ನೇ ಪ್ರತಿವಾದಿಯ ಮದುವೆಯಾಗಲಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಹಣ ಅನ್ಯತ ಖರ್ಚು ಆಗುವುದನ್ನು ತಪ್ಪಿಸಲು 1 ನೇ ಪ್ರತಿವಾದಿ ವಾದಿಗೆ ಹಣ ವಾಪಸ್ಸು ಕೊಡಲು ಹೋಗಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನನ್ನು ನಾನು ನೋಡಿದ್ದೇನೆ. ಜಮೀನು ಬುಕ್ಕಾಂಬೂದಿ ಗ್ರಾಮಕ್ಕೆ ಹತ್ತಿರದಲ್ಲಿ ಇದೆ ಎಂದರೆ ಸರಿ. ಅಜ್ಜಂಪುರ-ಬುಕ್ಕಾಂಬೂದಿ ರಸ್ತೆಗೆ ಹೊಂದಿಕೊಂಡು ಜಮೀನು ಇದೆ ಎಂದರೆ ಸರಿ. ಸದರಿ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ದಾವಾ ಜಮೀನು ಮನೆ ಕಟ್ಟಿಕೊಳ್ಳಲು, ವ್ಯಾಪಾರ ವಹಿವಾಟು ಮಾಡಲು ಸೂಕ್ತ ಜಾಗ ಎಂದರೆ ಸರಿ. ಈ ಎಲ್ಲಾ ಕಾರಣಕ್ಕೆ ರಸ್ತೆಯ ಪಕ್ಕದಲ್ಲಿ ಇರುವ ಜಮೀನುಗಳ ಬೆಲೆ ಜಾಸ್ತಿಯಾಗಿದೆ ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಯಾವುದೇ ರೀತಿಯ ಖರೀದ ವ್ಯವಹಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಕರಾರು ಪತ್ರವನ್ನು ಬರೆದುಕೊಡಲಾಗಿತ್ತು ಎಂದರೆ ಸರಿಯಲ್ಲ. ವಾದಿ ನಕ್ಷೆ ತಯಾರಾಗಿದೆ ಎಂದು ನನಗೆ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸೃಷ್ಠಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಒಂದೇ ಸಮುದಾಯವರು ಇದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.